# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 403

ಸದಸ್ಯರ ಹೆಸರು : ಶ್ರೀ ಎಂ. ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 12.12.2018

ಉತ್ತರಿಸುವ ಸಚಿವರು : ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 94ಸಿ ಮತ್ತು 94ಸಿಸಿ ಯೋಜನೆಯಡಿಯಲ್ಲಿ ನಗರ ಪರಿಮಿತಿ ಶುಲ್ಕ ಮತ್ತು ವಿಸ್ತೀರ್ಣ ಮರು ನಿಗದಿ ನಿರ್ಣಯ ಕೈಗೊಳ್ಳಲಾಗಿದೆಯೇ; (ಪ್ರತಿ ಒದಗಿಸುವುದು) | ದಿನಾಂಕ:01/01/2015ರ ಪೂರ್ವದಲ್ಲಿ **ಗ್ರಾಮಾಂತರ** ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94–ಸಿ ಅಡಿಯಲ್ಲಿ 30x40, 40x60 ಮತ್ತು 50x80 ಅಡಿ ವಿಸ್ತೀರ್ಣದವರೆಗೆ ಸಕ್ರಮಗೊಳಿಸಲು ಅವಕಾಶವಿರುತ್ತದೆ. ಹಾಗೆಯೇ, ನಗರ ಪ್ರದೇಶದಲ್ಲಿ ಕಲಂ 94–ಸಿಸಿ ರಡಿಯಲ್ಲಿ ಬಿ.ಬಿ.ಎಂ.ಪಿ, ನಗರ ಕಾರ್ಪೋರೇಷನ್, ಸಿಎಂಸಿ, ಟಿಎಂಸಿ ಮತ್ತು ಪಟ್ಟಣ ಪಂಚಾಯತಿ ವ್ಯಾಪ್ತಿಯಿಂದ ನಿರ್ದಿಷ್ಟಪಡಿಸಿದ ಅಂತರದೊಳಗಿನ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು 20x30 ಚದರಡಿ ವಿಸ್ತೀರ್ಣಕ್ಕೆ ಮಾತ್ರ ಸೀಮಿತಗೊಳಿಸಲಾಗಿತ್ತು.<br>ನಂತರ, ಮುನಿಸಿಪಲ್ ಕಾರ್ಪೋರೇಷನ್‌ಗಳು, ಮುನಿಸಿಪಾಲಿಟಿಗಳು ಮತ್ತು ಪಟ್ಟಣ ಪಂಚಾಯತಿ ಹೊರ ವ್ಯಾಪ್ತಿಯ ಪರಿಮಿತಿಯ ದೂರದಿಂದ 18 ಕಿ.ಮೀ. ರಿಂದ 3 ಕಿ.ಮೀ. ವರೆಗೆ ಒಳಪಡುವ ಪ್ರದೇಶಗಳಲ್ಲಿ (ಅಂದರೆ ಬಫರ್ ಜ಼ೋನ್) ವಾಸದ ಮನೆಗಳನ್ನು ಸಕ್ರಮ ಮಾಡುವಾಗ 30x40 ಚದರಡಿವರೆಗೆ ನಿರ್ಮಿಸಿದ ಮನೆಗಳನ್ನು ಪರಿಗಣಿಸಲು ಕಾಯ್ದೆಗೆ ತಿದ್ದುಪಡಿ ತರಲಾಗಿದೆ.<br>ಶುಲ್ಕದ ವಿವರವನ್ನು <u>ಅನುಬಂಧ–1</u> ರಲ್ಲಿ ಲಗತ್ತಿಸಿದೆ. |
| ಆ) | 94ಸಿ ಮತ್ತು 94ಸಿಸಿ ಯೋಜನೆಯಲ್ಲಿ ಇಲ್ಲಿಯವರೆಗೆ ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು; | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94–ಸಿ ಅಡಿಯಲ್ಲಿ 6,08,393 ಅರ್ಜಿಗಳು ಹಾಗೂ ಕಲಂ 94–ಸಿಸಿ ರಡಿಯಲ್ಲಿ 2,52,075 ಅರ್ಜಿಗಳನ್ನು ಸ್ವೀಕರಿಸಲಾಗಿದೆ. |
| ಇ) | ಮಂಜೂರಾದ ಅರ್ಜಿಗಳಲ್ಲಿ ಎಷ್ಟು ಹಕ್ಕು ಪತ್ರಗಳನ್ನು ನೀಡಲಾಗಿದೆ; | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 94–ಸಿ ಅಡಿಯಲ್ಲಿ ಸ್ವೀಕೃತವಾದ ಅರ್ಜಿಗಳ ಪೈಕಿ ಮಂಜೂರಾದ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಿದ ಅರ್ಜಿಗಳ ಸಂಖ್ಯೆ **1,12,315** ಹಾಗೂ ಕಲಂ 94–ಸಿಸಿ ರಡಿಯಲ್ಲಿ ಸ್ವೀಕೃತವಾದ ಅರ್ಜಿಗಳ ಪೈಕಿ ಮಂಜೂರಾದ ಪ್ರಕರಣಗಳಲ್ಲಿ ಹಕ್ಕುಪತ್ರ ನೀಡಿದ ಅರ್ಜಿಗಳ ಸಂಖ್ಯೆ **40,185.** |
| ಈ) | 94ಸಿ ಮತ್ತು 94ಸಿಸಿ ಯೋಜನೆಯಡಿ ಅರ್ಜಿ ವಿಲೇವಾರಿ ಹಕ್ಕುಪತ್ರ ನೀಡುವಲ್ಲಿ ವಿಳಂಬ ನೀತಿ ಅನುಸರಿಸುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುವುದು; | ಈ ಯೋಜನೆಯಡಿ ಅರ್ಜಿ ವಿಲೇವಾರಿ ಹಾಗೂ ಹಕ್ಕುಪತ್ರ ನೀಡುವಲ್ಲಿ ವಿಳಂಬ ನೀತಿ ಅನುಸರಿಸಿರುವುದು ವರದಿಯಾಗಿರುವುದಿಲ್ಲ. |

| | | |
|---|---|---|
| ಉ) | 94ಸಿ ಮತ್ತು 94ಸಿಸಿ ಯೋಜನೆಯಲ್ಲಿ ಸಿ.ಆರ್.ಝುಡ್., ಕುಮ್ಕಿ, ಗೋಮಾಳ, ಗೇರುಲೀಸ್, ಸಿ.ಎಸ್.ಡಿ, ಡೀಮ್ಡ್ ಫಾರೆಸ್ಟ್ ವ್ಯಾಪ್ತಿಯಲ್ಲಿ ವಾಸವಿರುವ ಬಡವರಿಗೆ ಹಕ್ಕುಪತ್ರ ವಿತರಿಸಲು ಇರುವ ತೊಡಕುಗಳೇನು; ಈ ವ್ಯಾಪ್ತಿಗೆ ಒಳಪಡುವ ಒಟ್ಟು ಪ್ರಕರಣಗಳೆಷ್ಟು; ಡೀಮ್ಡ್ ಗೋಮಾಳ ಸಹಿತ ಅಡೆತಡೆ ವಿರಹಿತಪಡಿಸಿ ಹಕ್ಕುಪತ್ರ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರಿ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ವಾಸದ ಮನೆಗಳನ್ನು ಕಲಂ 94ಸಿ ಮತ್ತು ಕಲಂ 94ಸಿಸಿ ಅಡಿಯಲ್ಲಿ ಸಕ್ರಮಗೊಳಿಸಲು ಅವಕಾಶವಿರುತ್ತದೆ.<br>ಗೋಮಾಳ ಜಮೀನಿಗೆ ಸಂಬಂಧಿಸಿದಂತೆ ಗೋಮಾಳ ಜಮೀನು ಆ ಗ್ರಾಮದ ಜಾನುವಾರುಗಳ ಅನುಗುಣವಾಗಿ ನಿಗಧಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿಕೊಂಡಿರುವ ವಾಸದ ಮನೆಗಳನ್ನು ಸಕ್ರಮಗೊಳಿಸಲು ಅವಕಾಶವಿದೆ.<br>ಉಳಿದಂತೆ ಯಾವುದೇ ವರ್ಗದ ಜಮೀನುಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಮನೆಗಳನ್ನು ಸಕ್ರಮಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |
| ಊ) | 94ಸಿ ಮತ್ತು 94ಸಿಸಿ ಯೋಜನೆಯಡಿ ಎಲ್ಲಾ ಅಡೆತಡೆಗಳನ್ನು ನಿವಾರಿಸಿ, ಯೋಜನೆಯ ಆಶಯದಂತೆ ಬಡವರಿಗೆ ಕಾಲಮಿತಿಯಲ್ಲಿ ಹಕ್ಕುಪತ್ರ ನೀಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ? (ಸಂಪೂರ್ಣ ಮಾಹಿತಿ ನೀಡುವುದು) | ಕಲಂ 94ಸಿ ಮತ್ತು 94ಸಿಸಿ ಅಡಿಯಲ್ಲಿ ಸ್ವೀಕೃತವಾದ ಎಲ್ಲಾ ಅರ್ಜಿಗಳನ್ನು ಅರ್ಹತೆ ಅನುಸಾರ ಪರಿಶೀಲಿಸಿ ನಿಗದಿತ ಕಾಲಮಿತಿಯಲ್ಲಿ ವಿಲೇ ಮಾಡಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ಆರ್‌ಡಿ 114 ಎಲ್‌ಜಿಕ್ಯೂ 2018**

**(ಆರ್.ವಿ.ದೇಶಪಾಂಡೆ)**
**ಕಂದಾಯ ಹಾಗೂ ಕೌಶಲ್ಯಾಭಿವೃದ್ಧಿ,**
**ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು**

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ-IVA | ಬೆಂಗಳೂರು, ಶನಿವಾರ, ಫೆಬ್ರವರಿ ೪, ೨೦೧೭ (ಮಾಘ ೧೫, ಶಕ ವರ್ಷ ೧೯೩೮) | ನಂ. ೧೪೨ |
|---|---|---|
| Part-IVA | Bengaluru, Saturday, February 4, 2017 (Magha 15, Shaka Varsha 1938) | No. 142 |

**REVENUE SECRETARIAT**

**NOTIFICATION**

**No. RD 46 LGP 2016, Bengaluru, Dated; 04-02-2017**

The draft of the following rules further to amend the Karnataka Land Revenue Rules, 1966 was published as required by sub-section (1) of section 197 of the Karnataka Land Revenue Act, 1964 (Karnataka Act 12 of 1964) in Notification No. RD 46 LGP 2016, dated: 19-01-2017, published in Part IV-A of the Karnataka Gazette dated: 20-01-2016 inviting objections and suggestions from all the persons likely to be affected thereby within fifteen days from the date of its publication in the Official Gazette.

Whereas the said Gazette was made available to the public on 20-02-2017.

And whereas no objections and suggestions have been received by the State Government within the period specified above.

Now, therefore, in exercise of the powers conferred by sub-section (1) of section 197 of the Karnataka Land Revenue Act, 1964 (Karnataka Act 12 of 1964) the Government of Karnataka hereby makes the following rules to amend the Karnataka Land Revenue Rules, 1966, namely:-

**RULES**

**1. Title and Commencement.**-(1) These rules may be called the Karnataka Land Revenue (Second Amendment) Rules, 2017.

(2) They shall come into force from the date of their final publication in the Official Gazette.

**2. Substitution of Schedule-I.**- In the Karnataka Land Revenue Rules, 1966 (hereinafter referred to as the said rules), for the schedule I and the entries relating there under the following shall be substituted, namely :-

SCHEDULE-I
(see rule 108-S)
Rate for Regularization

| Sl. No. | Place | Area | Dimensions (in feet) | Rate for regularization (Nominal) | |
|---|---|---|---|---|---|
| | | | | For others | For SC/ST /Physically challenged persons/Ex-servicemen and Poura Karmikas |
| 1. | State (Rural Area) | Cover Rural Area in the State. | Up to 30 x 40 (1200 Sq.ft) | Rs.1000/- | Rs.500/- |
| 2. | | | Up to 40 x 60 (2400 Sq.ft) | Rs.2000/- | Rs.1000/- |
| 3. | | | Up to 50 x 80 (4000 Sq.ft) | Rs.3000/- | Rs.1,500/- |

**3. Substitution of Schedule-II.-** In the said rules, for schedule-II and the entries relating there under the following shall be substituted, namely :-

**SCHEDULE-II**
**(see rule 108-Y)**
**Rate for Regularization**

| Sl. No. | Places | Distance | Rate for regularization (Nominal) | |
|---|---|---|---|---|
| | | | Others | For SC/ST /Physically challenged person /Ex-servicemen and Poura Karmikas. |
| (1) | (2) | (3) | (4) | (5) |
| | **For Dimension : 20 x 30 feet. (i.e., up to 600 sq. ft.)** | | | |
| 1 | Bruhat Bengaluru Mahanagara Palike under the Karnataka Municipal Corporations Act, 1976. | 18 Kms | Rs,5,000/- | Rs.2,500/- |
| 2 | The Cities of Belagavi, Kalaburgi, Hubbali-Dharwada, Mangaluru and Mysuru respectively under the provisions of Karnataka Municipal Corporations Act, 1976. | 10 Kms | | |
| 3 | All City Municipal Councils under the Karnataka Municipalities Act, 1964. | 5 Kms | | |
| 4 | Other Municipal Corporations under the Karnataka Municipal Corporations Act, 1976. | 10 Kms | | |
| 5 | Town Municipal Councils and Town Panchayats under the Karnataka Municipalities Act, 1964. | 3 Kms | | |

By Order and in the name of the Governor of Karnataka

S.L.MAHANTHE GOWDA
Under Secretary to Government,
Revenue Department (Land Grants-1).